★★★

“ನೀವೇಕೆ ಬೇರೆ ಕಡೆ ಕೆಲಸ ನೋಡಬಾರದು?”

ಕಾಳಜಿ ಬೆರೆತ ದನಿಯಲ್ಲಿ ಹಾಗೆಂದು ಕೇಳಿದವಳು ಎಂದಿಗಿಂತ ಸಮೀಪದಲ್ಲಿ ಕುಳಿತಿರುವಂತೆನಿಸಿತು ರಾಜೀವನಿಗೆ.

“ಬಿಟ್ಟು ಹೋಗಬಹುದು. ಈ ಶರ್ಮಾನ ವರ್ತನೆ ನೋಡಿದಾಗೆಲ್ಲಾ ನನಗೆ ಹಾಗೇ ಅನಿಸುತ್ತದೆ. ಆದರೆ ರಮೇಶ್ ಸರ್‌ರ ಮುಖ ನೋಡಿಕೊಂಡು ಸುಮ್ಮನಿದ್ದೇನೆ.”

ಕಾಫಿಯ ಸಿಪ್ಪೊಂದನ್ನು ಹೀರಿ ರಾಜೀವ ಮುಂದುವರೆಸಿದ.

“ಅಂದು ಕೆಲಸವಿಲ್ಲದೆ ಅಲೆಯುತ್ತಿದ್ದಾಗ ಇಂಟರ್ವ್ಯೂ ಕೂಡಾ ಮಾಡದೆ ಸೇರಿಸಿಕೊಂಡವರು ರಮೇಶ್ ಸರ್. ಈಗ ಬೇರೆ ಯಾರೇ ಬಂದರೂ ನಾನು ಮಾಡುತ್ತಿರುವ ಕೆಲಸ ನಿಭಾಯಿಸುವುದು ಕಷ್ಟವಿದೆ. ಅದರಲ್ಲೂ ಈ ಶರ್ಮಾನನ್ನು ತಡೆದುಕೊಂಡು ಯಾರೂ ಆರು ತಿಂಗಳಿಗಿಂತ ಹೆಚ್ಚಿಗೆ ಉಳಿಯಲಾರರು. ಅದೊಂದೇ ಋಣ, ಇವತ್ತಿಗೂ ನನ್ನನ್ನಿಲ್ಲೇ ಕಟ್ಟಿಹಾಕಿರುವುದು.”

“ಅದೊಂದೇನಾ? ಬೇರೆ ಯಾರೂ ಇಲ್ವಾ?”

ಹಾಗೆ ಕೇಳಿದವಳ ದನಿಯಲ್ಲಿ ಥಟ್ಟನೆ ಇಣುಕಿತ್ತು ಹುಸಿಗೋಪ. ಆ ಮುನಿಸಿನ ಆಳದಿಂದ ಎದ್ದುಬಂದಿದ್ದ ಪ್ರಶ್ನೆ ತೀರಾ ಸ್ಪಷ್ಟವಾಗಿತ್ತು:

‘ನಿಮ್ಮನ್ನಿಲ್ಲಿ ಕಟ್ಟಿ ಹಾಕಿರುವ ಸೆಳೆತಗಳ ಪಟ್ಟಿಯಲ್ಲಿ ನನ್ನ ಹೆಸರಿಲ್ಲವಾ?’

ಕ್ಯಾಂಟೀನಿನ ಗೋಡೆಗೆ ತೂಗುಹಾಕಿದ್ದ ಹೂವಿನ ಭಾವಚಿತ್ರ ಇದ್ದಕ್ಕಿದ್ದಂತೆ ಸುಮಧುರ ಘಮಸೂಸುತ್ತಿರುವಂತೆ ಭಾಸವಾಯಿತು ರಾಜೀವನಿಗೆ. ಗಿಡದಂಚಿನಲ್ಲಿ ಅರಳಲು ಸಿದ್ಧವಾಗಿ ನಿಂತಿರುವ ಮೊಗ್ಗಿನಂತೆ ನವಿರಾದ ರಹಸ್ಯವನ್ನು ಬಚ್ಚಿಟ್ಟುಕೊಂಡು ತನ್ನನ್ನೇ ನೋಡುತ್ತಿದ್ದ ಆ ಕಣ್ಣಿನಾಳವನ್ನೇ ನೋಡುತ್ತಾ ಉಳಿದುಬಿಟ್ಟ. ಆ ದಿನ ಕಚೇರಿಯಿಂದ ಬಸ್ ನಿಲ್ದಾಣದ ತನಕ ನಡೆದವರ ನಡುವೆ ಒಂದು ಮಾತೂ ಹುಟ್ಟಲಿಲ್ಲ. ತೀರಾ ಬಸ್ಸು ಹತ್ತುವಾಗ ಇಷ್ಟು ಹೊತ್ತಿನಿಂದ ತಯಾರಿ ಮಾಡಿಕೊಂಡ ಮಾತೊಂದನ್ನು ಅವನಿಗಷ್ಟೇ ಕೇಳುವಂತೆ ಪಿಸುಗುಟ್ಟಿ ಹೋದಳು ಮಂಗಳಾ:

“ನನಗೆ ಮನೆಯಲ್ಲಿ ಗಂಡು ನೋಡುತ್ತಿದ್ದಾರೆ!”

★★★

“ವೇಣು ಬಂದಿದಾನೆ ನೋಡೋ ರಾಜೀ...”

ಅಮ್ಮನ ಕರೆ ಕೇಳಿದ ರಾಜೀವ ಹಿತ್ತಲಕಡೆ ಅಂಗಳದಿಂದ ಮುಂಬಾಗಿಲಿಗೆ ಬಂದ. ನಡುವಳದ ಹೊಸಿಲಿನಲ್ಲಿ ಅವನ ಮುಖ ಕಾಣಿಸಿಕೊಳ್ಳುತ್ತಿದ್ದಂತೆಯೇ ಜಗುಲಿಯಲ್ಲಿ ಕುರ್ಚಿಯ ಮೇಲೆ ಆಸೀನನಾಗಿದ್ದ ವೇಣು ಮೇಲೆದ್ದು ಹೇಯ್ ಎಂದು ಮುಗುಳ್ನಕ್ಕ. ಒಂದೇ ಶಾಲೆಯ ಒಂದೇ ಬೆಂಚಿನಲ್ಲಿ ಕುಳಿತು ಓದಿದ ಬಾಲ್ಯದ ಗೆಳೆಯ ವೇಣು. ದೊಡ್ಡ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿ ಕೆಲಸಮಾಡುತ್ತಿದ್ದ. ಇನ್ನೇನು ಎರಡು ವಾರದಲ್ಲಿ ಆಗಲಿದ್ದ ಮದುವೆಗೆ ಬಾಲ್ಯದ ಗೆಳೆಯನನ್ನು ಆಹ್ವಾನಿಸಲೆಂದು ತಾನೇ ಬಂದಿದ್ದ.

“ಯಾವಾಗ ಬಂದ್ಯಪ್ಪಾ ಲಂಡನ್‌ನಿಂದ?”

ಅಪ್ಪ ಕೇಳಿದರು.

“ಒಂದು ತಿಂಗಳಾಯ್ತು ರಾಯ್ರೇ.”

ವೇಣು ಉತ್ತರಿಸಿದ.

“ಮತ್ತೆ ಹೋಗ್ಬೇಕಾ ಹೇಗೆ?”

“ಇಲ್ಲ. ಪ್ರಾಜೆಕ್ಟ್ ಮುಗ್ದಿದೆ. ಇನ್ನು ಬೆಂಗಳೂರಲ್ಲೇ ಕೆಲಸ.”